ಶ್ರೀ ಜಿ.ಟಿ. ದೇವೆಗೌಡ

ಅ) ದಿನಾಂಕ 01.01.2006 ರಿಂದ 31.12.2006 ರವರೆಗಿನ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳಿಂದ ರೈತರು ಪಡೆದಿರುವ ರೂ.25.000/ – ವರೆಗಿನ ಬೆಳೆ ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಲಾಗಿದೆ. ರೂ.25.000/– ಮೇಲ್ಪಟ್ಟು ಬೆಳೆ ಸಾಲ ಪಡೆದಿರುವ ಪ್ರಕರಣಗಳ್ಲಲಿ ರೂ 25.000/– ರೋಳಗೆ ರೈತರು ಸಂಬಂದಪಟ್ಟ ಸಹಕಾರಿ ಸಂಸ್ಥೆಗಳಿಗೆ ಮರು ಪಾವತಿಸಿದಲ್ಲಿ ರು 25.000/– ಅಸಲು ಹಾಗೂ ಮರು ಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಇ) ದಿನಾಂಕ:01.01.2006ಕ್ಕೆ ಪೂರ್ವದಲ್ಲಿ ರೈತರು ಸಹಕಾರ ಸಂಘಗಳಿಂದ ಪಡೆದಿರುವ ರೂ.25.000/– ವರೆಗಿನ ಸಾಲವನ್ನು ಮನ್ನಾ ಮಾಡುವ ಯಾವುದೆ ಪ್ರಸ್ತಾವವು ರಾಜ್ಯ ಸರ್ಕಾರದ ಮುಂದೆ ಇರುವುದಿಲ್ಲ.

221 (557) ಶ್ರೀ ಪದ್ಮನಾಭ ಕೊಟ್ಟಾರಿ.ಕೆ.(ವಿಟ್ಲ)

ಮಾನ್ಯ ತೋಟಗಾರಿಕೆ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತೋಟಗಾರಿಕೆ ಇಲಾಖೆಯ ಮುಖಾಂತರ ರೈತರಿಗೆ ಯಾವ ಯಾವ ಗಿಡಗಳನ್ನು ನೀಡಲಾಗುತ್ತಿದೆ; ಯಾವ ಆಧಾರದಲ್ಲಿ ಎಷ್ಟೆಷ್ಟು ಗಿಡಗಳನ್ನು ನೀಡಲಾಗುತ್ತದೆ;

ಆ) ಗಿಡಗಳನ್ನು ಪಡೆದು ರೈತರು ಯಾವ ರೀತಿಯಾಗಿ ಪೋಷಣೆ ಮಾಡುತ್ತಿದ್ದಾರೆಂದು, ಸರ್ಕಾರದ ವತಿಯಿಂದ ಸರ್ವೆ ಕಾರ್ಯ ನಡೆಯುತ್ತಿದೆಯೇ; ಸರ್ವೇ ಕಾರ್ಯದ ನಂತರ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಶಶಿಕಾಂತ ಅ ನಾಯಕ

ಅ) ತೋಟಗಾರಿಕೆ ಇಲಾಖೆಯ ಮುಖಾಂತರ ರೈತರಿಗೆ ತೋಟಗಾರಿಕೆ ಕ್ಷೇತ್ರ/ ನರ್ಸರಿಗಳಲ್ಲಿ ಉತ್ಪಾದಿಸುವ ವಿವಿಧ ಹಣ್ಣು, ತೋಟದ ಬೆಳೆಗಳು, ಅಲಂಕಾರಿಕ ಗಿಡಗಳು, ಸಾಂಬಾರು, ಇತ್ಯಾದಿ ತೋಟಗಾರಿಕೆ ಗಿಡಗಳನ್ನು ನೀಡಲಾಗುತ್ತಿದೆ.

ಅವುಗಳನ್ನು ನೀಡಲು ಪರಿಗಣಿಸುವ ಆಧಾರವೇನೆಂದರೆ, ಕ್ಷೇತ್ರ/ ನರ್ಸರಿಗಳಲ್ಲಿ ಉತ್ಪಾದಿಸುವ ಗಿಡಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ವಿವಿಧ ಯೋಜನೆಗಳ ಮಾರ್ಗಸೂಚಿಯನ್ವಯ ಉಚಿತವಾಗಿ ಸಹ ವಿತರಿಸಲಾಗುತ್ತಿದೆ.

ಆ) ರೈತರು ತೋಟಗಾರಿಕೆ ಇಲಾಖೆಯಿಂದ ಗಿಡಗಳನ್ನು ಪಡೆದು ಬೆಳೆಸುವ ಹಂತದಲ್ಲಿ ಇಲಾಖಾ ತಾಂತ್ರಿಕ ಅಧಿಕಾರಿಗಳು ಮಾರ್ಗದರ್ಶನ ನೀಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ರೈತರ ತಾಕುಗಳಿಗೆ ಸಹ ಭೇಟಿ ನೀಡಿ ತಾಂತ್ರಿಕ ವಿವರಗಳನ್ನು ನೀಡುತ್ತಿದ್ದಾರೆ. ಇಲಾಖೆಯ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಗಿಡಗಳ ಪೋಷಣೆ ಮತ್ತು ಪಾಲನೆ ಬಗ್ಗೆ ಆಗಾಗ್ಗೆ ತೋಟಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಾರೆ..

ಗಿಡಗಳನ್ನು ಪಡೆದ ರೈತರು ಯಾವ ರೀತಿಯಾಗಿ ಪೋಷಣೆ ಮಾಡುತ್ತಿದ್ದಾರೆಂದು ಸರ್ಕಾರದ ವತಿಯಿಂದ ಪ್ರತ್ಯೇಕವಾಗಿ ಸರ್ವೇ ಕಾರ್ಯ ನಡೆಸುತ್ತಿಲ್ಲ. ಆದರೆ, ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳ ಮೌಲ್ಯಮಾಪನವನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ ಮಾಡಿಸಲಾಗುತ್ತಿದೆ.